ಬೇಲೂರು ನಗರಕ್ಕೆ ಕೆ.ಎಸ್. ಆರ್.ಟಿ.ಸಿ. ಬಸ್ ಘಟಕ ಮಂಜೂರಾತಿ

924 (1371) ಶ್ರೀ ವೈ.ಎನ್. ರುದ್ರೇಶಗೌಡ (ಬೇಲೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೇಲೂರು ತಾಲ್ಲೂಕಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ಡಿಪೋ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬೇಲೂರು ನಗರದ ಸಮೀಪ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಬಸ್ ಡಿಪೋಗಾಗಿ ಜಮೀನು ಖರೀದಿಸಿರುವುದು ನಿಜವೇ;

ಇ) ಜಮೀನು ಖರೀದಿಸಿದ್ದಲ್ಲಿ, ಬಸ್ ಡಿಪೋ ಮಂಜೂರು ಮಾಡಲು ಸರ್ಕಾರದಿಂದ ವಿಳಂಬವಾಗಿರಲು ಕಾರಣವೇನು?

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು) :

ಅ) ಹೌದು.

ಆ) ಮತ್ತು ಇ) ಸಾರಿಗೆ ಸಂಸ್ಥೆಯ ಮುಂದಿನ ದಿನಗಳ ಸಾರಿಗೆ ಅವಶ್ಯಕತೆಗೆ ಅನುಗುಣವಾಗಿ ಬೇಲೂರು ನಗರದಲ್ಲಿ ಸರ್ವೆ ಸಂಖ್ಯೆ: 148, 161 ಹಾಗೂ 102 ರಲ್ಲಿ 3 ಎಕರೆ 19 ಗುಂಟೆ ನಿವೇಶನವನ್ನು ನೀರಾವರಿ ಇಲಾಖೆಯಿಂದ ಭೂಸ್ವಾದೀನಪಡಿಸಿಕೊಳ್ಳಲು ಕ್ರಮ ಜರುಗಿಸಲಾಗುತ್ತಿದ್ದು, ಸದರಿ ಪ್ರಕ್ರಿಯೆಗಳು ಅಂತಿಮ ಹಂತದಲ್ಲಿರುತ್ತವೆ. ಸಾರಿಗೆ ಸಂಸ್ಥೆಯ ಮುಂದಿನ ದಿನಗಳ ಸಾರಿಗೆ ಅವಶ್ಯಕತೆ ಹಾಗೂ ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಈ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು.

ಅಂಗನವಾಡಿ ಕೇಂದ್ರಗಳಲ್ಲಿ ಪೌಷ್ಠಿಕ ಆಹಾರ ತಯಾರಿಸುವುದು

927 (1129) ಶ್ರೀ ಶಿವಲಿಂಗೆಗೌಡ ಕೆ.ಎಂ. (ಅರಸೀಕೆರೆ) : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಗನವಾಡಿ ಕೇಂದ್ರಗಳಿಗೆ ಪೌಷ್ಠಿಕ ಆಹಾರ ತಯಾರಿಸಲು ಸ್ತ್ರೀ ಶಕ್ತಿ ಸಂಘಗಳ ಮುಖಾಂತರ ನಡೆಸಬೇಕೆಂದು ಸುಪ್ರೀಂ ಕೋರ್ಟಿನಲ್ಲಿ ತೀರ್ಪು ಬಂದಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಸ್ತ್ರೀ ಶಕ್ತಿ ಸಂಘಕ್ಕೆ ವಹಿಸಿಕೊಡದಿರಲು ಕಾರಣಗಳೇನು;

ಇ) ಈ ಹಿಂದೆ ಆಹಾರ ತಯಾರು ಮಾಡುವುದು ಮತ್ತು ಸರಬರಾಜು ಮಾಡುತ್ತಿದ್ದ ಸಂಸ್ಥೆಗೆ ಆಹಾರ ಪೂರೈಕೆ ಮಾಡುವುದರಿಂದ ಕೈಬಿಡಲು ಕಾರಣಗಳೇನು (ಪೂರ್ಣ ಮಾಹಿತಿ ನೀಡುವುದು)?

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮಕ್ಕಳ ಕಲ್ಯಾಣ ಸಚಿವರು) :

ಅ) ಹೌದು, ಅಂಗನವಾಡಿ ಕೇಂದ್ರಗಳಿಗೆ ಆಹಾರ ಸರಬರಾಜು ಮಾಡಲು ಗುತ್ತಿಗೆದಾರರನ್ನು ಉಪಯೋಗಿಸಬಾರದೆಂದು ಹಾಗೂ ಪೂರಕ ಪೌಷ್ಟಿಕ ಆಹಾರಗಳನ್ನು ಸರಬರಾಜು ಮಾಡಲು ಸ್ಥಳೀಯ ಮಹಿಳಾ ಮಂಡಳಿ, ಮಹಿಳಾ ಸ್ವಸಹಾಯ ಗುಂಪುಗಳು ಹಾಗೂ ಗ್ರಾಮ ಸಮುದಾಯಕ್ಕೆ ಆಧ್ಯತೆ ನೀಡಲು ಆದೇಶಿಸಿರುತ್ತದೆ.

ಅ) ದಿನಾಂಕ: 1.08.2009 ರಿಂದ ಮಹಿಳಾ ಸ್ವಸಹಾಯ ಗುಂಪುಗಳು ಸ್ತ್ರೀಶಕ್ತಿ ಗುಂಪಿನ ಸದಸ್ಯರು ಅಂಗನವಾಡಿ ಮಕ್ಕಳ ತಾಯಂದಿರ ನೊಳಗೊಂಡಂತೆ ರಚಿಸಿರುವ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನ ಹಾಗೂ ತರಬೇತಿ ಕೇಂದ್ರಗಳಿಂದ ಅಂಗನವಾಡಿ ಕೇಂದ್ರದ ಆಹಾರ ಸಾಮಗ್ರಿಗಳನ್ನು ಖರೀದಿಸಲಾಗುತ್ತಿದೆ.

ಇ) ಅಂಗನವಾಡಿ ಕೇಂದ್ರಗಳಿಗೆ 1.08.2009 ರಿಂದ ಪೌಷ್ಟಿಕ ಆಹಾರವನ್ನು ಸುಪ್ರೀಂ ಕೋರ್ಟಿನ ಆದೇಶದನ್ವಯ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನ ಹಾಗೂ ತರಬೇತಿ ಕೇಂದ್ರಗಳಿಂದ ಖರೀದಿಸು ತ್ತಿರುವುದರಿಂದ ಹಿಂದಿನ ಸ್ಥಳೀಯ ಸರಬರಾಜುದಾರರಿಂದ ಸರಬರಾಜು ಆಗುತ್ತಿಲ್ಲ.

ರಾಜ್ಯದ ಸರ್ಕಾರಿ ಆಸ್ಪತ್ರೆಯಲ್ಲಿನ ಖಾಲಿ ಇರುವ ವಿವಿಧ ದರ್ಜೆಯ ಹುದ್ದೆ ಹಾಗೂ ಕೊರತೆಯಿರುವ ಸಲಕರಣೆ ಹಾಗೂ ಔಷಧಿಗಳು

926 (1380) ಶ್ರೀ ಶಿವಕುಮಾರ್ ಡಿ.ಕೆ. (ಕನಕಪುರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಎಷ್ಟು ವೈದ್ಯರ ಮತ್ತು ಇತರೆ ಸಿಬ್ಬಂದಿಗಳ ಹುದ್ದೆಗಳು ಖಾಲಿ ಇವೆ. ಅವು ಯಾವುವು;